SRI AZEEZ SAIT.— Sir, The Assembly seems to have become a mini lounge. Some meetings are held on that side. That should be avoided.

(*ii*) *Reg. Strike by the labourers of Samyukta Karnataka, Hubli.*

ಶ್ರೀ ಎಂ. ಜಿ. ಜರತಾರಗರ್.—ಅಧ್ಯಕ್ಷರೇ, ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕ ದಿನಪತ್ರಿಕೆಯ ಕಾರ್ಮಿಕರು ಮುಷ್ಕರ ಹೂಡಿರುವ ವಿಚಾರವನ್ನು ಮಾನ್ಯ ಕಾರ್ಮಿಕ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

SAMYUKTHA KARNATAKA was covered under the employees Provident Fund Act, 1952 during 1957. The establishment was exemted under section 17 of the above Act. The Provident Fund of the employees working in Samyuktha Karnataka was administered by a Board of Trustees called the Loka Shikshana Trust Employees P.F Trust, constituted according to the terms of exemption it consisted of representativies of management and employees in equal numbers The Board of Trustees were required. under the terms and conditions of the exemption to invest available provident Fund accumulations in the approved securities every month.

Karnataka Patrika Private Ltd., became the employers of Samyutha Karnataka from 1974 onwords. The exemption continued and the Board of Trustees continued to administer the funds under the name of Karnataka Patrika Private Ltd., EPF Trust. JAYA-KARNATAKA NEWS PRINTERS (P) Ltd., became the employer of SAMYUKTHA KARNATAKA during 1977. The exemption continued and the Fund was being administered by the Board of Trustees., under the style of J.N.P. employees P.F. Trust.

The exemption granted to the establishment was cancelled during August, 1980, for violation of the terms under which exemption was granted. After the cancellation of exemption the employer is responsible to impliment the various provisions of the Act and the scheme as an unexempted establishment, Mainly, the employer must remit the contribution collected from the employees to the EPF every month before 15th On cancellation of exemption the investments made in the various securities by the above mentioned Trusts should have been transferred to the Board of Trustees of E. P. F. Organisation. These transfers have not been effected. The amount involved is about Rs. 20 lakhs. The Provident Fund authorities cannot settle the P.F. account of outgoing members since the securities have not been transferred to them and as such they were not in possition of the amount. Once these securities are transferred to the Board of Trustees of EPF the PF. authorities can settle the PF. accounts of the outgoing members.

The Provident Fund Commissioner of Karnataka Region was consulted in the matter He suggested that various securities held by the trust may be transferred to the Board of Ttustees. EPF organisation in consultationwith the Reserve Bank of India (Public Debt Office). Action will be taken accordingly.

The administrator of the establishment has been requested to take action settle the dues of the employees as early as possible ಸ್ವಾಮಿ ಪ್ರಾವಿಡೆಂಟ ಫಂಡ್ ಕಮೀಷನರು ಇದಕ್ಕೆ ಸಂಬಂಧಪಟ್ಟ ಅಡ್ಮಿನಿಸ್ಟ್ರೇಟರ್ ಸಭೆಯನ್ನು ಕರೆದು ಸೆಕ್ಯೂರಿಟಿ ವಿಚಾರದಲ್ಲಿ ಮಾತನಾಡಿದ್ದಾರೆ. ಅವರ ಪ್ರಕಾರ ಸುಮಾರು ೨೦ ಲಕ್ಷ ರೂಪಾಯಿಯಷ್ಟು ಹಣವನ್ನು ಇವರ ಅಕೌಂಟ್‌ಗೆವರ್ಗಾಯಿಸಬೇಕು. ಆ ಹಣ ರಿಸರ್ವ್ ಬ್ಯಾಂಕಿನ ಸೆಕ್ಯೂರಿಟಿಯಲ್ಲಿ ಇದೆ. ಯಾವ ಪ್ರಕಾರ ಇದನ್ನು ವರ್ಗಾಯಿಸಬೇಕು ಎನ್ನುವುದರ ಬಗ್ಗೆ ಚರ್ಚೆ ಮಾಡಿ ಅವರು ಹೇಳಿದಂತೆ ಮಾಡಬೇಕಾಗುತ್ತದೆ. ಆ ಕಡೆಯಿಂದ ಇವರ ಕಡೆಗೆ ವರ್ಗಾಯಿಸಬೇಕಾಗಿದೆ. ಇದಕ್ಕೆ ಆ ಪತ್ರಿಕೆಯ ಕಾರ್ಮಿಕರ ಒಪ್ಪಿಗೆಯೂ ಇದೆ ಅವರೂ ಸಹ ಹೇಳುತ್ತಾರೆ. ಸಿಗ್ನೆಚರ್ ಎಲ್ಲಿ ಹಾಕಬೇಕು ಅಂತ ಹೇಳಿದರೆ ಅಲ್ಲಿ ಹಾಕುತ್ತೇವೆ ಎಂದು. ಶ್ರೀ ಹೆಚ್. ಆರ್. ಬಸವರಾಜು ಮಷ್ತು ಅವರು, ಅವರೆಲ್ಲಾ ಕೂಡಿ ಅಲ್ಲಿಗೆ ಹೋಗಿ ಇದನ್ನು ಸೆಟಲ್ ಮಾಡಿಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಸಾಧ್ಯವಾದಷ್ಟು ಬೇಗ ಇದನ್ನು ಸೆಟಲ್ ಮಾಡಿ ಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಈಗ ಸುಮಾರು ೨೫ ಜನ ಔಟ್ ಗೋಯಿಂಗ್ ಜನ ಏನು ಇದ್ದಾರೆ ಅವರು ಹೋಗಿ ಇದನ್ನು ಮೊದಲು ಸೆಟಲ್ ಮಾಡಬೇಕು. ಆವರೂ ಸಹ ಬೇಗನೆ ಹೋಗಿ ಸಟಲ್ ಮಾಡಿ ಮುಗಿಸುತ್ತೇವೆ ಎಂದು ಹೇಳಿದ್ದಾರೆ.

ಶ್ರೀ ಎಂ. ಜಿ. ಜರತಾಗರ್.-- ಈ ಒಂದು ''ಸಂಯುಕ್ತ ಕರ್ನಾಟಕ'' ಬಹಳ ವುರಾತನವಾದ ಪತ್ರಿಕೆಯಾಗಿದೆ. ಇಲ್ಲಿನ ಕಾರ್ಮಿಕರಿಂದ ಹಾಗೂ ಮಾಲೀಕರಿಂದ ಶೇಕಡಾ ಎಂಟೂಕಾಲು ಭಾಗ ಹಣವನ್ನು ಕಳೆದ ಎರಡು ಮೂರು ವರ್ಷಗಳಿಂದ ಕಲೆಕ್ಟ್ ಮಾಡಿರುವುದು ಸುಮಾರು ೨೦ ಲಕ್ಷ ಆಗಿದೆ. ಈಗ ಅಲ್ಲಿನ ಕಾರ್ಮಿಕರು ರಸ್ತೆಯಲ್ಲಿದ್ದಾರೆ. ಒಬ್ಬರು ತೀರಿಕೊಂಡು ಅವರ ಹೆಣ್ಣುಮಕ್ಕಳು ರಸ್ತೆಯಲ್ಲಿದ್ದಾರೆ. ಎಷ್ಟೋ ಜನ ಹಣ ಇಲ್ಲದೆ ಬಹಳ ಕಷ್ಟಪಡುತ್ತಿದ್ದಾರೆ. ಈ ಜನರಿಗೆ ಪ್ರಾವಿಡೆಂಟ್ ಫಂಡ್ ಹಣ ಸಿಗಬೇಕಾದುದು ಅವಶ್ಯಕ ಇದೆ. ಈ ದಿಸೆಯಲ್ಲಿ ನೀವು ಕೂಡ ಹೋದ ತಿಂಗಳು ಆಶ್ವಾಸನೆಯನ್ನು ಕೊಟ್ಟಿದ್ದಿರಿ. ಅಲ್ಲಿ ಅವರು ಉಪವಾಸ ಕುಳಿತಿದ್ದಾರೆ. ಇಷ್ಟು ದಿವಸಗಳಲ್ಲಿ ಪ್ರಾವಿಡೆಂಟ್ ಫಂಡ್ ಹಣ ಅಲ್ಲಿನ ಎಲ್ಲಾ ಜನರಿಗೆ ಮುಟ್ಟಬೇಕು. ಎನ್ನುವ ಬಗ್ಗೆ ಕಾರ್ಯ ಪ್ರವೃತ್ತರಾಗಬೇಕೆಂದು ನಾನು ಹೇಳುತ್ತೇನೆ.

ಶ್ರೀ ಬಾಪೂರಾವ್ ದೇಶಪಾಂಡೆ.-- ಪೂನ್ಯ ಮಂತ್ರಿಗಳ ಉತ್ತರದಿಂದ ಒಂದು ವಿಷಯ ಸ್ಪಷ್ಟವಾಗಿದೆ, ಕಾರ್ಮಿಕರ ಒಡವರ ಹಿತಕ್ಕೆ ಬರುವ ಕ್ಷೇಮ ನಿಧಿಯ ಸಂಗ್ರಹದ ಹಣದ ಬಗ್ಗೆ ಸರ್ಕಾರ ಮಲಗಿದೆ. ಪ್ರಾವಿಡೆಂಟ್ ಫಂಡ್ ಕಮಿಷನರ್ ಅಲಕ್ಷ್ಯ ಮಾಡಿದ್ದಾರೆ. ಮಹಾಪರಾಧ ಮಾಡಿದ್ದಾರೆ. ತಿಂಗಳು ಮೇಲಿಂದ ಮೇಲೆ ರಿಟರ್ನ್ ಕೊಡಬೇಕೆಂದು ಕಾನೂನು ಇದೆ ಆ ರಿಟರ್ನ್ ಕೊಟ್ಟಿಲ್ಲ. ಅದನ್ನು ಕೊಡದಿದ್ದರೆ ಕ್ರಮ ಕೈಗೊಳ್ಳಬೇಕೆನ್ನುವ ಕಾನೂನು ಇದೆ. ಈ ಬಗ್ಗೆ ಕ್ರಮ ಕೈಗೊಂಡಿಲ್ಲ. ಈಗಾಗಲೇ ಇಬ್ಬರು ನಿವೃತ್ತರಾಗಿದ್ದ ಅವರಿಗೆ ಭವಿಷ್ಯ ನಿಧಿಯ ಲಾಭ ಸಿಕ್ಕಿಲ್ಲ. ಒಬ್ಬ ಕಾರ್ಮಿಕರ ಪತ್ನಿ ತೀರಿಕೊಂಡಿದ್ದಾರೆ. ಅವರ ಅಂತ್ಯ ಕ್ರಿಯೆ ಸಹಾಯ ಮಾಡಿಲ್ಲ. ಈ ರೀತಿಯ ಪರಿಸ್ಥಿತಿ ಇರುವಾಗ ನೀವು ಮಾಡುತ್ತೇವೆ ಎಂದು ಹೇಳಿದರೆ ಅರ್ಥವಿಲ್ಲ. ನೀವು ಮನಸ್ಸು ಮಾಡಿದರೆ ಸ್ಪೆಷಲ್ ರಿಸರ್ವ್ ಫಂಡ್ ಏನಿದೆ ಅದರಿಂದ ಇನ್ನು ೨೪ ಗಂಟೆಗಳಲ್ಲಿ ಅವರಿಗೆ ಹಣವನ್ನು ದೊರಕಿಸಿಕೊಡಬಹುದು. ಇದು ಏಕೆ ಆಗುವುದಿಲ್ಲ? ಮತ್ತು ತಪ್ಪಿತಸ್ಥರು ಯಾರಿದ್ದಾರೆ ಅವರ ಮೇಲೆ ಕ್ರಮ ಕೈಗೊಳ್ಳಿ. ಇನ್ನು ಅಧಿಕಾರ ದುರುಪಯೋಗ ಮಾಡಿಕೊಂಡು ಅಪರಾಧವನ್ನು ಮಾಡಿರುವ ಕಮೀಷನರ್ ಹಾಗೂ ಫ್ಯಾಕ್ಟರಿ ಅಧಿಕಾರಿಗಳು ಏನಿದ್ದಾರೆ ಅವರನ್ನು ಮನೆಗೆ ಕಳುಹಿಸಬೇಕು. ಹಾಗೂ ಈ ಜನರಿಗೆ ಪ್ರಾವಿಡೆಂಟ್ ಫಂಡ್ ಹಣವನ್ನು ಕೊಡುವ ವ್ಯವಸ್ಥೆ ಮಾಡಬೇಕು. ವಿಳಾಟಿಂಗ್ ಗೀಟಿಂಗ್ ಯಾವುದೂ ಬೇಕಾಗಿಲ್ಲ. ಅದನ್ನು ಮಾಡುತ್ತೀರಾ?

ಶ್ರೀ ಪಂಪಾಪತಿ, -- ಪ್ರಾವಿಡೆಂಟ್ ಫಂಡ್ ಕೇವಲ ಒಂದು ಕೈಗಾರಿಕೆಗೆ ಸೀಮಿತವಾಗಿಲ್ಲ. ರಾಜ್ಯದ ಸುಮಾರು ೨೦ ಕೈಗಾರಿಕೆಗಳಿಗೆ ಇದು ಸೀಮಿತವಾಗಿದೆ, ಇವತ್ತು ಏನು ಸಂಯುಕ್ತ ಕರ್ನಾಟಕ ಸಂಸ್ಥೆಗೆ

ಪರಿಸ್ಥಿತಿ ಒದಗಿದೆ ಈ ಸ್ಥಿತಿ ರಾಜ್ಯದ ಸಾವಿರಾರು ಕೈಗಾರಿಕೆಗಳಲ್ಲಿ ಇದೆ. ಕಾರ್ಮಿಕರಿಂದ ಸಂಗ್ರಹ ಮಾಡಿದ ಹಣವನ್ನು ಪ್ರಾವಿಡೆಂಟ್ ಫಂಡ್ ಕಛೇರಿಗೆ ಕೊಡದೆ ಅದನ್ನು ಬಳಸಿಕೊಂಡು ಕೊನೆಗೆ ಕಾರ್ಮಿಕರಿಗೆ ಈ ರೀತಿಯ ತೊಂದರೆ ಕೊಟ್ಟಿರತಕ್ಕ ಬೇಕಾದಷ್ಟು ನಿದರ್ಶನಗಳು ಸರ್ಕಾರಕ್ಕೆ ಗೊತ್ತಿದೆ. ಆದರೆ ಈ ಬಗ್ಗೆ ಸರ್ಕಾರ ಗಮನಹರಿಸಿಲ್ಲಿ. ಪ್ರತಿ ತಿಂಗಳೂ ಕಾರ್ಮಿಕರಿಂದ ಸಂಗ್ರಹ ಆಗತಕ್ಕ ಹಣವನ್ನು ಆ ತಿಂಗಳೇ ಕಚೇರಿಗೆ ಕಟ್ಟಬೇಕೆಂದು ಆಜ್ಞೆ ಇದ್ದರೂ ಕೂಡ ಇಷ್ಟೊಂದು ನಿರ್ಲಕ್ಷತನದಿಂದ ಅದನ್ನು ಹಾಗೇ ಬಿಟ್ಟು ಇವತ್ತು ಇವರನ್ನು ತೊಂದರೆಗೆ ಈಡುಮಾಡುತ್ತಿರುವುದು ಸರಿಯಲ್ಲ. ಹಾಗೂ ಪ್ರಾವಿಡೆಂಟ್ ಫೆಂಡ್ ತರಹವೇ ಇ.ಎಸ್.ಐ, ಹಣ ಕೂಡ ಆಗುತ್ತಿದೆ. ಇ.ಎಸ್.ಐ, ನವರೂ ಕೂಡ ಕಾರ್ಮಿಕರಿಂದ ಹಣವನ್ನು ಸಂಗ್ರಹಣೆ ಮಾಡುತ್ತಾರೆ. ಆ ಹಣದ ಜೊತ ಮಾಲೀಕರೂ ತಮ್ಮ ಪಾಲನ್ನು ಸೇರಿಸಿ ಕೊಡಬೇಕಾಗುತ್ತದೆ. ಅದು ಆಗದೇ ಆ ಕಾರ್ಮಿಕರಿಗೂ ಬಹಳ ತೊಂದರೆ ಆಗುತ್ತಿದೆ. ಮುಂದೆ ಈ ರೀತಿ ಆಗದ ಹಾಗೆ ತಡೆಗಟ್ಟಬೇಕೆಂದು ನಾನು ಹೇಳುತ್ತೇನೆ.

ಶ್ರೀ ಎ. ಬಿ. ಜಕನೂರ್.— ಅಧ್ಯಕ್ಷರೆ, ಮಾನ್ಯ ಸದಸ್ಯರು ಏನು ಸರ್ಕಾರದ ಗಮನಕ್ಕೆ ಸಂಯುಕ್ತ ಕರ್ನಾಟಕದ ಕಾರ್ಮಿಕರ ಬಗ್ಗೆ ಹೇಳಿದ್ದಾರೆ, ಆದು ಸರ್ಕಾರದ ಗಮನಕ್ಕೆ ಬಂದಿದೆ. ಕಮಿಷನರ ಮೇಲೆ ಏಕೆ ಕ್ರಮ ಕೈಗೊಂಡಿಲ್ಲವೆಂದು ಕೇಳಿದ್ದಾರೆ. ಇಲ್ಲಿ ಕೆಲವು ತಾಂತ್ರಿಕವಾಗಿ ಲೀಗಲ್ ಕಾಂಪ್ಲಿಕೇಷನ್ ಇದೆ. ೧೯೭೭ರಲ್ಲಿ ಜಯಕರ್ನಾಟಕ ನ್ಯೂಸ್ ಪ್ರಿಂಟರ್ಸ್ (ಪ್ರೈ.) ಲಿಮಿಟೆಡ್ ಸಂಯುಕ್ತ ಕರ್ನಾಟಕದ ಎಂಪ್ಲಾಯರ್ ಆಯಿತು. ಹಾಗೂ ಎಕ್ಸ್‌ಟೆಂಷನ್ ಗ್ರಾಂಟನ್ನು ಆಗಸ್ಟ್ ೧೯೫೦ರಲ್ಲಿ ಕ್ಯಾನ್ಸಲ್ ಮಾಡಲಾಯಿತು. ಕರಾರು ಪ್ರಕಾರ ನಡೆದುಕೊಳ್ಳಲಿಲ್ಲವೆಂದು ಈ ಕ್ರಮ ತೆಗೆದುಕೊಳ್ಳಲಾಯಿತು. ನಂತರ ಜಯಕರ್ನಾಟಕ ನ್ಯೂಸ್ ಪ್ರಿಂಟ್ ಲಿಮಿಟೆಡ್‌ನ್ನು ಸರ್ಕಾರ ತೆಗೆದುಕೊಂಡಿತು. ಅಲ್ಲಿನ ಟ್ರಸ್ಟಿಯ ಸಹಿ ಮಾಡಿ ಎಂಡಾರ್ಸ್‌ಮೆಂಟ್ ಮಾಡದೇ ಆ ಖಾತೆಯ ಹಣವನ್ನು ವರ್ಗಾಯಿಸುವುದಕ್ಕೆ ಬರುವುದಿಲ್ಲ. ಈಗ ಅವರು ಮುಂದೆ ಬಂದಿದ್ದಾರೆ. ನಾವು ಎಲ್ಲಿ ಬೇಕಾದರೂ ಸಹಿ ಹಾಕುತ್ತೇವೆ, ಕಾರ್ಮಿಕರ ಹಣ ಕೊಡುವುದು ಸರಿಯಾದುದು ಎಂದು ಮುಂದೆ ಬಂದಿದ್ದಾರೆ. ಪ್ರಾವಿಡೆಂಟ್ ಫಂಡ್ ಕಮಿಷನ್ ಮತ್ತು ಆಡ್ಮಿನಿಸ್ಟ್ರೇಟರ್ಸ್‌ಗೂ ಇದನ್ನು ತಿಳಿಸಲಾಗಿದೆ. ರಿಸರ್ವ್ ಬ್ಯಾಂಕಿಗೆ ಹೋಗಿ ಎಲ್ಲಿ ಸೈನ್ ಮಾಡಬೇಕೋ ಅಲ್ಲಿ ಸಹಿ ಹಾಕಿ ಆ ಬಗ್ಗೆ ವ್ಯವಹಾರ ನಡೆಸಬೇಕಾಗಿದೆ. ಈ ಬಗ್ಗೆ ಏನು ಮಾಡಿ ಮುಗಿಸಬೇಕೋ ಅದನ್ನು ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಅದು ಇವತ್ತೆ ಆಗಬಹುದು. ನಿರ್ದಿಷ್ಟವಾಗಿ ಆ ಬಗ್ಗೆ ಹೇಳುವುದಕ್ಕೆ ಬರುವುದಿಲ್ಲ. ರಿಸರ್ವ್ ಬ್ಯಾಂಕ್‌ಗೆ ಹೋಗಬೇಕು, ಹಣ ಖಾತೆಗೆ ಜಮಾ ಆಗಬೇಕು. ಆಮೇಲೆ ಮಾಹಿತಿ ತೆಗೆದುಕೊಳ್ಳಬೇಕು. ಇದೆಲ್ಲಾ ಒಂದೆರಡು ದಿವಸಗಳಲ್ಲಿ ಆಗಬಹುದು. ಸಾಧ್ಯವಾದಷ್ಟು ಬೇಗ ಇದನ್ನು ಮಾಡಿ ಮುಗಿಸುವುವಕ್ಕೆ ಸರ್ಕಾರ ತಯಾರಿದೆ. ಮತ್ತು ಮಾನ್ಯ ಪಂಪಾಪತಿಯವರು ಪ್ರಾವಿಡೆಂಟ್ ಫಂಡ್ ಹಣದಂತೆ ಇ.ಎಸ್.ಐ. ಪಂತಿಗೆಯೂ ಸರಿಯಾಗಿ ಜಮವಾಗುತ್ತಿಲ್ಲ ಎನ್ನುವ ಮಾತನ್ನು ಹೇಳಿದರು. ಆದರೆ ಅವರು ಯಾವ ಯಾವ ಎಸ್ಟಾಬ್ಲಿಷ್‌ಮೆಂಟ್‌ನಲ್ಲಿ ಈ ರೀತಿ ಆಗಿದೆ ಎಂದು ನಿರ್ದಿಷ್ಟವಾಗಿ ಹೇಳಿದರೆ ಆ ಬಗ್ಗೆ ನಿಜವಾಗಿಯೂ ಕ್ರಮ ತೆಗೆದುಕೊಳ್ಳುತ್ತೇವೆ. ಹೀಗೆ ಜನರಲ್ಲಾಗಿ ಹೇಳಿದರೆ ಅದನ್ನು ಮಾಡುವುದಕ್ಕಾಗುವುದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್. —ಮಾನ್ಯ ಮಂತ್ರಿಗಳ ಉತ್ತರ ನೋಡಿದರೆ ಅದು ಬಹಳ ಆಶಾದಾಯಕವಾಗಿದೆ. ಆದರಿಂದೇನೊ ಆ ಜನರ ಹೊಟ್ಟೆ ತುಂಬುವುದಿಲ್ಲ ಇಷ್ಟು ದಿವಸಗಳ ಒಳಗೆ ಆ ಸತ್ಯಾಗ್ರಹ ಮಾಡುತ್ತಿರುವ ಕಾರ್ಮಿಕರ ಹಣವನ್ನು ಕೊಡುವುದಕ್ಕಾಗುತ್ತದೆಂದು ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು.

ಶ್ರೀ ಎ. ಬಿ. ಜಕನೂರ್.—ಈ ಬಗ್ಗೆ ನಿನ್ನೆಯಿಂದಲೇ ಕಾರ್ಯಪ್ರವೃತ್ತರಾಗಿದ್ದಾರೆ. ಇವತ್ತು, ನಾಳೆ, ನಾಳಿದ್ದು ಆಗಬಹುದು. ೧೦ ಜನ ಕೂಡ ಬೇಕಾಗುತ್ತದೆ. ಟ್ರಸ್ಟೀ, ಆಡ್ಮಿನಿಸ್ಟ್ರೇಟರ್, ಪರ್ಸನಲ್ ಆಫೀಸರ್, ಪ್ರಾವಿಡೆಂಟ್ ಫಂಡ್ ಕಮಿಷನರ್ ಮುಂತಾದವರೆಲ್ಲಾ ಕುಳಿತು ಮಾತನಾಡಬೇಕಾಗುತ್ತದೆ. ಇಷ್ಟೆಲ್ಲ ದಿನ ಎಂದು ನಿರ್ದಿಷ್ಟವಾಗಿ ಹೇಳುವುದಕ್ಕೆ ಬರುವುದಿಲ್ಲ. ಆದಷ್ಟೂ ಸಾಧ್ಯವಾದಷ್ಟು ಬೇಗನೆ ಅದನ್ನು ಕೊಡಿಸುತ್ತೇವೆ. ಒಂದು ವೇಳೆ ಆ ಹಣವನ್ನು ತೆಗೆದುಕೊಳ್ಳುವುದಕ್ಕೆ ತಡೆ ಆದರೆ ಬೇರೆ ವ್ಯವಸ್ಥೆ ಮಾಡುವುದಕ್ಕೆ ನಾವು ಶುರು ಮಾಡಿದ್ದೇವೆ. ಸರ್ಕಾರ ಈ ಬಗ್ಗೆ ಬೇಗನೆ ಕ್ರಮ ತೆಗೆದುಕೊಂಡು ತಕ್ಕ ವ್ಯವಸ್ಥೆ ಮಾಡುತ್ತದೆ.

ಶ್ರೀ ಬಾವೂರಾವ್ ದೇಶಪಾಂಡೆ.— ಕಾರ್ಮಿಕರು ತಮ್ಮ ವಂತಿಕೆಯನ್ನು ಕೊಟ್ಟಿದ್ದರೂ ಆ ಹಣವನ್ನು ಅಲ್ಲೇ ಉಳಿಸಿಕೊಂಡಿದ್ದರ ಬಗ್ಗೆ ಏನು ಆಕ್ಷನ್ ತೆಗೆದುಕೊಂಡಿದ್ದೀರಿ. ಅವರು ತಪ್ಪು ಮಾಡಿ

ದ್ದಾರೆ. ಅವರ ಮೇಲೆ ಕಾನೂನು ಬದ್ಧ ಕ್ರಮ ಕೈಗೊಳ್ಳುತ್ತೀರಾ? ಎರಡನೆಯದಾಗಿ ಸರ್ಕಾರ ಇದನ್ನು ತೆಗೆದುಕೊಂಡು ೬ ತಿಂಗಳು ಆಯಿತು. ಈ ಬಗ್ಗೆ ಮಾನ್ಯ ಮಂತ್ರಿಗಳು ಆಶ್ವಾಸನೆ ಕೊಟ್ಟು ೨ ತಿಂಗಳು ಆಯಿತು. ಅವರ ಮುಷ್ಕರ ಹೂಡಿ ೧೫ ದಿವಸಗಳಾದವು. ಈ ಅವಧಿಯಲ್ಲಿ ಯಾವುದೇ ಕ್ರಮವನ್ನು ಏತಕ್ಕೆ ಕೈಗೊಳ್ಳಲಿಲ್ಲಾ? ಈಗ ಇರುವ ರಿಸರ್ವ ಫಂಡ್ ಏನಿದೆ ಅದರಿಂದ ಹಣ ಪಡೆದು ಕೊಂಡು ಈ ಕಾರ್ಮಿಕರಿಗೆ ಏಕೆ ಹಂಚಬಾರದು? ಆ ಹಣದ ವಸೂಲಿಯನ್ನು ಬೇಕಾದರೆ ಆಮೇಲೆ ಮಾಡಿಕೊಳ್ಳಿ. ರಿಸರ್ವ ಫಂಡ್‌ನ ಹಣವನ್ನು ಅವರಿಗೆ ಕೊಡುವುದಕ್ಕೆ ಮಾನ್ಯ ಮಂತ್ರಿಗಳು ಆಜ್ಞೆ ಮಾಡಿದರೆ ಅದನ್ನು ೩ ದಿವಸಗಳಲ್ಲಿ ಅವರಿಗೆ ಕೊಡುವುದಕ್ಕೆ ಬರುತ್ತದೆ. ಇದನ್ನು ಸರ್ಕಾರ ಮಾಡುತ್ತದೆಯೇ ?

೧೦.೩೦ ಎಎಂ.

ಶ್ರೀ ಎ.ಬಿ. ಜಕನೂರ್.—ಸ್ವಾಮಿ, ನಾನು ಈಗಾಗಲೇ ಹೇಳಿದೆ. ಈ ವಿಷಯದಲ್ಲಿ ಕಾರ್ಮಿಕರದು ಏನೂ ತಪ್ಪಿಲ್ಲ, ಪಾಪ. ಆದರೆ ಮ್ಯಾನೇಜ್‌ಮೆಂಟ್ ಚೇಂಜ್ ಆಗುತ್ತಾ ಇದೆ. ಮೂರು, ನಾಲ್ಕು ಮ್ಯಾನೇಜ್‌ಮೆಂಟ್ ಚೇಂಜ್ ಆಯಿತು. ೧೯೭೪ ರಲ್ಲಿ ಒಬ್ಬರು ತೆಗೆದುಕೊಂಡರು ೧೯೭೬ ರಲ್ಲಿ ಒಬ್ಬರು ತೆಗೆದುಕೊಂಡು, ೧೯೭೭ ರಲ್ಲಿ ಒಬ್ಬರು ತೆಗೆದುಕೊಂಡರು. ಈ ರೀತಿ ಮ್ಯಾನೇಜ್‌ಮೆಂಟ್ ಚೇಂಜ್ ಆಗುವುದರಿಂದ ಆ ಟ್ರಸ್ಟಿ ಹೆಸರಿನಲ್ಲಿ ಹಣ ಇರುವುದರಿಂದ, ಆ ಟ್ರಸ್ಟಿ ಸೈನ್ ಮಾಡದೆ ಇರುವುದರಿಂದ ತೊಂದರೆಯಾಗಿದೆ. ಈ ರೀತಿ ಕಾರ್ಮಿಕರಿಗೆ ಅನ್ಯಾಯ ಮಾಡುತ್ತಾ ಇದ್ದೀರಿ, ಅದನ್ನು ಕೊಡಲೇಬೇಕು, ಈ ಕೆಲಸವನ್ನು ಬೇಗನೆ ಮಾಡಬೇಕು ಇಲ್ಲದೇ ಹೋದರೆ ಕಾಯಿದೆ ಪ್ರಕಾರ ನಿಮ್ಮ ಮೇಲೆ ಕ್ರಿಮಿನಲ್ ಕೇಸ್ ಹಾಕುತ್ತೇವೆಂದು ಹೇಳಿದ್ದರಿಂದ ಎಲ್ಲರೂ ಒಪ್ಪಿಗೆ ಕೊಟ್ಟಿದ್ದಾರೆ, ಬೇಗನೆ ಆಗುತ್ತದೆ, ಸರ್ಕಾರ ಅದೇ ಪ್ರಯತ್ನದಲ್ಲಿದೆ ಮಾನ್ಯ ಸದಸ್ಯರು ಕಳವಳ ವ್ಯಕ್ತಪಡಿಸುವುದಕ್ಕೆ ಕಾರಣವಿಲ್ಲ. ನಾನು ಹುಬ್ಬಳ್ಳಿಗೆ ಹೋದಾಗ ಈ ವಿಷಯವನ್ನು ನನ್ನ ಗಮನಕ್ಕೆ ತಂದರು. ಆಗ ನಾನು ಅವರಿಗೆಲ್ಲಾ ಹೇಳಿದ್ದೇನೆ. ಕಾರ್ಮಿಕರು ೧೦ ನೇ ತಾರೀಖು ಧರಣಿ ಕೂತರು, ಆಗ ಇದಕ್ಕೆ ಸ್ವಲ್ಪ ಚಾಲನೆ ಸಿಕ್ಕಿತು, ಬೇಗನೆ ಮಾಡಬೇಕಾಯಿತು ಅದಕ್ಕೆ ಸಭೆ ಕರೆದು ಹೇಳಿದ್ದೇನೆ; ಸಾಧ್ಯವಾದಷ್ಟು ಬೇಗನೆ ಮಾಡುವುದಕ್ಕೆ ಹೇಳಿದ್ದೇನೆ.

ಶ್ರೀ ಬಾವೂರಾವ್ ದೇಶಪಾಂಡೆ.—ನಾವೂ ಧರಣಿ ಕೂತರೆ ಇನ್ನಷ್ಟು ಬೇಗ ಆಗಬಹುದು. ಮೊದಲು ರಿಜರ್ವ್ ಫಂಡ್‌ನಲ್ಲಿ ಹಣ ಕೊಟ್ಟು ಆಮೇಲೆ ಏಕೆ ವಸೂಲು ಮಾಡಬಾರದು.

ಶ್ರೀ ಎ.ಬಿ. ಜಕನೂರ್.—ಅರ್ಡಿನರಿ ಕೋರ್ಸ್‌ನಲ್ಲಿ ಅದನ್ನು ಮಾಡುತ್ತಾ ಇದ್ದರು. ಅವರು ಧರಣಿ ಕೂತ ಕೂಡಲೇ ಅದಕ್ಕೆ ಚಾಲನೆ ಸಿಕ್ಕಿದ ಮೇಲೆ ಬೇಗನೆ ಆಫೀಸರ್ಸ್ ಗಡಬಡಿಸಿ ಮಾಡಿದರು.

ಶ್ರೀ ಎಂ.ಜಿ. ಜರ್‌ತಾರ್‌ಗರ್.—ಮಾನ್ಯ ಕಾರ್ಮಿಕ ಮಂತ್ರಿಗಳು ತೀವ್ರವಾಗಿ ಮಾಡುತ್ತೇವೆ ಎಂದು ಹೇಳಿದರು. ಅವರ ಈ ಉತ್ತರದಿಂದ ನಮಗೆ ಸಮಾಧಾನವಾಗುವುದಿಲ್ಲ. ಏಕೆಂದರೆ, ಕಾರ್ಮಿಕರು ಕ್ಷೇಮನಿಧಿಗೆ ತಮ್ಮ ವಂತಿಗೆಯನ್ನು ಕೊಟ್ಟಿದ್ದಾರೆ. ಮಾಲೀಕರದು ತಪ್ಪಿದೆ ಎಂದು ಸ್ಪಷ್ಟಪಡಿಸಿದ್ದಾರೆ. ಮಾಲೀಕರು ತಪ್ಪು ಮಾಡಲಿಕ್ಕೆ ಕಾರಣ, ಅಲ್ಲಿನ ಪ್ರಾವಿಡೆಂಟ್ ಫಂಡ್ ಇನ್ಸ್‌ಪೆಕ್ಟರ್ ತಮ್ಮ ಕರ್ತವ್ಯವನ್ನು ಲೋಪ ಮಾಡಿದ್ದಾರೆ, ಆದ್ದರಿಂದ ಇದೆಲ್ಲಾ ತೊಂದರೆಯಾಗಿದೆ. ಅವರು ಸರಿಯಾಗಿ ಕೆಲಸ ನಿರ್ವಹಿಸಿದ್ದರೆ ಈ ತೊಂದರೆಯಾಗುತ್ತಾ ಇರಲಿಲ್ಲ. ಪ್ರಾವಿಡೆಂಟ್ ಫಂಡ್ ಕಮಿಷನರು ತಮ್ಮ ಕರ್ತವ್ಯಚ್ಯುತಿ ಮಾಡಿದ್ದಾರೆ. ತಾವೂ ಕೂಡ ರೀಜನಲ್ ಬೋರ್ಡ್‌ಗೆ ಛೇರ್ಮನ್ನಾಗಿದ್ದೀರಿ. ಆದುರಿಂದ ತಾವು ದಯವಿಟ್ಟು ಎಸ್.ಆರ್.ಎಫ್. ಫಂಡ್‌ನಿಂದ ಹಣ ರಿಲೀಸ್ ಮಾಡಿದರೆ ಅನುಕೂಲವಾಗುತ್ತದೆ. ಇಲ್ಲದೇ ಹೋದರೆ ದಿನೇ ದಿನೇ ಕಾರ್ಮಿಕರು ರೊಚ್ಚಿಗೆದ್ದು, ಈಗ ೪ ಮಂದಿ, ೮ ಮಂದಿ ಧರಣಿ ಮಾಡುತ್ತಾ ಇದ್ದಾರೆ ಮುಂದೆ ೨೦-೩೦ ಮಂದಿ ಕೂಡುವಂಥ ಪರಿಸ್ಥಿತಿ ಇದೆ. ನಿನ್ನೆ ಕೂಡ ಫೋನ್ ಬಂದಿತ್ತು, ನಾಳೆಯಿಂದ ಆಮರಣಾಂತ ಉಪವಾಸ ಕೂಡುತ್ತೇವೆ ಎಂದು ತಿಳಿಸಿದರು. ಅದಕ್ಕೆ ನಾವು ಹೇಳಿದೆವು, ಇವತ್ತು ಕಾಲಿಂಗ್ ಅಟೆನ್‌ಷನ್ ಇದೆ, ಮಾನ್ಯ ಮಂತ್ರಿಗಳು ಆಶ್ವಾಸನೆ ಕೊಡುತ್ತಾರೆ, ಏನಾಗುತ್ತದೆಂದು ತಿಳಿಸುತ್ತೇವೆಂದು ಹೇಳಿದೆವು. ತಾವು ನಾಳೆ ಅಥವಾ ನಾಡಿದ್ದು ೩ ದಿವಸದಲ್ಲಿ ಹಣ ರಿಲೀಸ್ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಬೇಕು, ಮತ್ತು ಧರಣಿ ಕೂತಂಥ ಜನರಿಗೆ ಹಿಂತೆಗೆದುಕೊಳ್ಳಲಿಕ್ಕೆ ತಮ್ಮಿಂದ ಆದೇಶ ಆಗಬೇಕು.

ಶ್ರೀ ಎ.ಬಿ. ಜಕನೂರ್.—ನಾನು ಈಗಾಗಲೇ ಹೇಳಿದ್ದೇನೆ. ಹಿಂದಿನವರಿಂದ ಲೋಪದೋಷ ಆಗಿರಬೇಕು, ಅಧಿಕಾರಿಗಳಿದ್ದೂ ಲೋಪದೋಷ ಆಗಿರಬೇಕು, ಮ್ಯಾನೇಜ್‌ಮೆಂಟ್‌ದೂ ಆಗಿರಬೇಕು. ನಾವು ಎಲ್ಲರಿಗೂ ತಾಕೀತು ಮಾಡಿದ್ದೇವೆ ರೀಜನಲ್ ಬೋರ್ಡ್ ಛೇರ್ಮನ್ ನಾನೇ ಇದ್ದೇನೆ, ಕೇಂದ್ರ ಸರ್ಕಾರದವರು ಮಾಡಿದ್ದಾರೆ. ಪ್ರಾವಿಡೆಂಟ್ ಫಂಡ್ ಕಮಿಷನರಿಗೆ, ಇನ್ಸ್‌ಪೆಕ್ಟರಿಗೆ ಎಲ್ಲರಿಗೂ ತಾಕೀತು ಮಾಡಿದ್ದೇನೆ. ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇನೆ. ಇಷ್ಟು ಹೇಳಿದರೂ ಮಾನ್ಯ ಸದಸ್ಯರು ನಮಗೆ ಸಮಾಧಾನವಾಗುವುದಿಲ್ಲವೆಂದು ಹೇಳಿದರು, ನಮಗೆ ಎಂದಿಗೂ ಸಮಾಧಾನ ವಾಗುವುದಿಲ್ಲ. ವಿರೋಧಪಕ್ಷದವರಿಗೆ ಸಮಾಧಾನ ಎಂದೂ ಆಗುವುದಿಲ್ಲ. ಕಾರ್ಮಿಕರಿಗೆ ಸಮಾಧಾನ ಮಾಡುವುದು ನನ್ನ ಕರ್ತವ್ಯವಿದೆ.

ಶ್ರೀ ಎಂ.ಸಿ. ನಾನಯ್ಯ.—ವಿರೋಧಪಕ್ಷದವರಿಗೆ ಸಮಾಧಾನವಾಗುವುದಿಲ್ಲ ಎಂದು ಹೇಳಬೇಡಿ. ಪ್ರಾವಿಡೆಂಟ್ ಫಂಡ್‌ಗೆ ಕಾರ್ಮಿಕರು ಕೊಟ್ಟಂಥ ಹಣವನ್ನು ಹಿಂದಕ್ಕೆ ಕೊಡುವುದಿಲ್ಲ ಎಂದು ಹೇಳುವು ದಿದ್ದರೆ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ. ವಿರೋಧಪಕ್ಷಗಳಿಗೆ ಸಮಾಧಾನವಾಗುವುದಿಲ್ಲ ಎನ್ನತಕ್ಕ ಮಾತನ್ನು ತಾವು ಆಡಬೇಡಿ. ಪ್ರಾವಿಡೆಂಟ್ ಫಂಡ್‌ಗೆ ಕಾರ್ಮಿಕರು ತಂತಿಗೆ ಕೊಟ್ಟಿದ್ದಾರೆ.

ಶ್ರೀ ಎ.ಬಿ. ಜಕನೂರ್.—ಮಾನ್ಯ ಅಧ್ಯಕ್ಷರೆ, ನಾನು ಆಗಲೇ ಹೇಳಿದೆ. ನಾವು ಇಷ್ಟೆಲ್ಲಾ ಪ್ರಯತ್ನ ಮಾಡಿದ್ದೇವೆ. ಯಾರಾದರೂ ಇಂಥವರಿಂದ ಅನ್ಯಾಯವಾಗಿದೆಯೆಂದು ಹೇಳಿದರೆ ಕ್ರಮ ತೆಗೆದುಕೊಳ್ಳುತ್ತೇನೆ ಮಾನ್ಯ ಸದಸ್ಯರು ಸಮಾಧಾನ ಮಾಡಿಕೊಳ್ಳಿ. ಕಾರ್ಮಿಕರಿಗೆ ನಾನು ಹೇಳುತ್ತೇನೆ. ಧರಣಿ ಕೂಡಬೇಡಿ, ಬೇಗನೆ ತಮ್ಮ ತಂತಿಗೆಯನ್ನು ಕೊಡಿಸುತ್ತೇನೆಂದು ಅವರಿಗೆ ತಿಳಿಸುತ್ತೇನೆ.

ಶ್ರೀ ಭಾವೂರಾವ್ ದೇಶಪಾಂಡೆ.—ರಿಜರ್ವ್ ಫಂಡ್‌ನಿಂದ ಇನ್ನು ೩-೪ ದಿವಸಗಳಲ್ಲಿ ವ್ಯವಸ್ಥೆ ಆಗದೇಹೋದರೆ ನಾವು ಇಲ್ಲಿಂದ ವಾಕೌಟ್ ಮಾಡುತ್ತೇವೆ. ರಿಜರ್ವ್ ಫಂಡ್‌ನಿಂದ ಕೊಡಲಿಕ್ಕೆ ಅಧಿಕಾರ ಇದೆ. ಅದಕ್ಕೆ ಏನಾದರೂ ಅಡ್ಡಿ ಇದ್ದರೆ ಹೇಳಲಿ, ರಿಜರ್ವ್ ಫಂಡ್‌ನಿಂದ ಹಣ ಕೊಡಲಿ, ಏಕೆ ಕೊಡಬಾರದು?

ಶ್ರೀ ಎ.ಬಿ. ಜಕನೂರ್.—ರಿಜರ್ವ್ ಫಂಡ್‌ನಿಂದಾಗಲಿ, ಎಲ್ಲಿಂದಾಗಲಿ, ಏನಾದರೂ ಮಾಡಿ ಆವರಿಗೆ ಸಲ್ಲತಕ್ಕ ಹಣವನ್ನು ಕೊಡಿಸತಕ್ಕ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಭಾವೂರಾವ್ ದೇಶಪಾಂಡೆ.—ರಿಜರ್ವ್ ಫಂಡ್‌ನಿಂದ ಹಣ ಕೊಡಲಿ ಆಮೇಲೆ ವಸೂಲು ಮಾಡಿಕೊಳ್ಳಿ.

ಶ್ರೀ ಹೆಚ್. ಗಂಗಾಧರನ್.—ಇನ್ನು ಮೂರು ದಿವಸಗಳಲ್ಲಿ ಆ ಕೆಲಸ ಮಾಡಿಬಿಡಿ.

೩೧೨ನೇ ನಿಯಮದ ಮೇರೆಗೆ:

ಮಂಡಕೇರಿ ಪಟ್ಟಣಕ್ಕೆ ಉತ್ತಮ ನೀರು ಸರಬರಾಜು ಮಾಡುವ ಬಗ್ಗೆ

† ಶ್ರೀ ಎಂ.ಸಿ. ನಾನಯ್ಯ.—ಮಾನ್ಯ ಅಧ್ಯಕ್ಷರೆ, ಈ ನಿಯಮ ೩೧೨ರ ಕೆಳಗೆ ತಂದಿರತಕ್ಕ ವಿಷಯಕ್ಕೆ ಉತ್ತರ ಕೊಡತಕ್ಕ ಮಂತ್ರಿಗಳಲ್ಲಿ ಈಗ ಇದಕ್ಕೆ ಯಾರು ಉತ್ತರ ಕೊಡುತ್ತಾರೆಂದು ಹೇಳ ಬೇಕು. ಮಾನ್ಯ ವಸತಿ ಹಾಗೂ ನಗರಾಭಿವೃದ್ಧಿ ಮಂತ್ರಿಗಳು ಕಾಣುವುದಿಲ್ಲ. ಮಾನ್ಯ ರಾಮಯ್ಯ ನವರು ಉತ್ತರ ಕೊಡುತ್ತಾರೆಯೇ. ತಾವು ಉತ್ತರ ಕೊಡಬೇಕು ಮತ್ತು ಅದಕ್ಕೆ ಸರಿಯಾದಂಥ ಸಮಾಧಾನ ಕೊಡಬೇಕು,

ಶ್ರೀ ಬಿ. ರಾಮಯ್ಯ.—ತಮ್ಮಿಂದ ಸುದ್ದಿ ಬಂದಮೇಲೆ ೨೪ ಗಂಟೆ ಮುಂಚಿತವಾಗಿ ಸಾಕಷ್ಟು ಮಾಹಿತಿ ತರಿಸಿಕೊಂಡಿದ್ದೇನೆ. ಮಾನ್ಯ ಸದಸ್ಯರಾದ ಧರ್ಮಸಿಂಗ್‌ರವರು ಬರಬೇಕಾಗಿತ್ತು. ಆದರೆ ಅವರ ಮಗನಿಗೆ ಆಪರೇಷನ್ ಇರುವುದರಿಂದ ಅವರು ಹೋಗಬೇಕಾಗಿದೆ.

(ಶ್ರೀ ಎಂ. ಚಂದ್ರಶೇಖರ್.—ಅವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಶ್ರೀ ಎಂ.ಸಿ. ನಾನಯ್ಯ.—ಮಾನ್ಯ ಅಧ್ಯಕ್ಷರೆ, ನನಗೆ ಬಹಳ ಆನಂದವಾಯಿತು. ಮಾನ್ಯ ಮಂತ್ರಿಗಳು ೨೪ ಗಂಟೆ ಮುಂಚಿತವಾಗಿ ಮಾಹಿತಿಯನ್ನು ತರಿಸಿಕೊಂಡಿದ್ದೇನೆಂದು ಹೇಳಿದರು. ಆದರೆ ಇವತ್ತು ಬೆಳಿಗ್ಗೆ ಎಂಟೂವರೆ ಗಂಟೆಗೆ ನಾನು ಮಂಡಕೇರಿಯಿಂದ ಮಾಹಿತಿಯನ್ನು ತರಿಸಿಕೊಂಡಿದ್ದೇನೆ. ಆ ಮಾಹಿತಿಯನ್ನು ತಮ್ಮ ಮುಂದಿಡುತ್ತೇನೆ. ಮಂಡಕೇರಿ ಕೊಡಗಿನ ಒಂದು ಮುಖ್ಯ ಪಟ್ಟಣ,